**1ನೇ ಹೆಚ್ಚುವರಿ ಸಿವಿಲ್ ದಂಡಾಧಿಕಾರಿಯವರ ನ್ಯಾಯಾಲಯ ಚನ್ನಗಿರಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 424/2025**

| **ಪಿರ್ಯಾದುದಾರರು :** | **ವಿರುದ್ಧ** | **ಆರೋಪಿತರು:** |
| --- | --- | --- |
| ಚನ್ನಗಿರಿ ಪೊಲೀಸ್ ಠಾಣೆ | ಎ1. ಪ್ರವೀಣ ಯಾನೇ ಪ್ರವೀಣ ನಾಯ್ಕ ಬಿನ್ ಓಂಕಾರನಾಯ್ಕ, ವಯಸ್ಸುಃ 35 ವರ್ಷ<br>ಎ2. ಮಹೇಶ ಯಾನೇ ಮಹೇಶ ನಾಯ್ಕ ಬಿನ್ ಓಂಕಾರನಾಯ್ಕ, ವಯಸ್ಸುಃ 30 ವರ್ಷ<br>ಎ3. ಸುನೀತಾ ಬಾಯಿ ಕೋಂ ಪ್ರವೀಣ ವಯಸ್ಸುಃ 30 ವರ್ಷ<br>ಎ.4 ಸುಮಿತ್ರಾ ಕೋಂ ಮಹೇಶನಾಯ್ಕ ವಯಸ್ಸುಃ 34 ವರ್ಷ<br>1 ರಿಂದ 4 ನೇ ಆರೋಪಿತರ ವಾಸ: ರಾಜಗೊಂಡನ ಹಳ್ಳಿ , ಚನ್ನಗಿರಿ ತಾಃ , ದಾವಣಗೆರೆ ಜಿಲ್ಲೆ | |

**<u>ದೋಷಾರೋಪಣೆ</u>**

**ನಾನು ಶ್ರೀಮತಿ ಮಹಾಲಕ್ಷ್ಮೀ ಜಿ 1**ನೇ ಹೆಚ್ಚುವರಿ ಸಿವಿಲ್.ನ್ಯಾ.ದಂಡಾಧಿಕಾರಿ, ಚನ್ನಗಿರಿ ಈ ಮೂಲಕ ನಿಮ್ಮ ಮೇಲೆ ಅಪಾಧಿಸುವುದೇನೆಂದರೆ ಆರೋಪಿತರಾದ ನಿಮ್ಮನ್ನು ಈ ಕೆಳಕಂಡ ಆಪಾದನೆಗೆ ಗುರಿಪಡಿಸುತ್ತೇನೆ.

ದಿಃ 16-08-2024 ರಂದು ಮದಾಹ್ನ 12.30 ಗಂಟೆ ಸಮಯದಲ್ಲಿ ಚನ್ನಗಿರಿ ಪೊಲೀಸ್ ಠಾಣಾ ಸರಹದ್ದಿನ ರಾಜಗೊಂಡನಹಳ್ಳಿ ಗಾರಮದ ಚಾಸಾ-1 ರವರು ತಮ್ಮ ವಾಸದ ಮನೆಯ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ತಮ್ಮ ಮನೆಯ ಬಟ್ಟೆಗಳನ್ನು ತೊಳೆದು ಒಣಗಲು ಹಾಕಿದ್ದು 1 ನೇ ಆರೋಪಿತನಾದ ನೀನು ತನ್ನ 3 ಚಕ್ರದ ಅಟೋವನ್ನು ಚಾಸಾ-1 ರವರ ಮನೆಯ ಮಂದಿನ ಖಾಲಿ ಜಾಗದಲ್ಲಿ ನಿಲ್ಲಿಸಿದ್ದು ಆಟೋದಲ್ಲಿದ್ದ ಸಿಮೆಂಟ್ ಧೂಳನ್ನು 1 ನೇ ಅರೋಪಿಯ ಮಕ್ಕಳು ಸದರಿ ಸಿಮೆಂಟ್ ಧೂಳನ್ನು ಚಾಸಾ-1 ರವರು ಒಣಗಿಸಿದ್ದ ಬಟ್ಟೆಯ ಮೇಲೆ ಕೊಡವಿದ್ದರಿಂದ ಚಾಸಾ-1 ರವರು ಧೂಳನ್ನು ಬಟ್ಟೆಗಳ ಮೇಲೆ ಹಾಕಿ ಕೊಳೆ ಮಾಡಬೇಡಿ ಎಂದು ಹೇಳಿದ್ದಕ್ಕೆ 1 ರಿಂದ 4 ನೇ ಅರೋಪಿತರಾದ ನೀವು ಸಮಾನ ಉದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಸೂಳೆ ಮುಂಡೆ ನಿನ್ನದು ಬಹಳ ಆಯಿತು ಎಂದು ಕೂಗಾಡಿದ್ದರಿಂದ ಅವಾಚ್ಯವಾಗಿ ಶಬ್ದಗಳಿಂದ ಬೈಯುವ ಮೂಲಕ ಭಾ.ನ್ಯಾ.ಸಂ. 352 ರ ಸಹ ಕಲಂ 3(5) ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಎರಡನೇಯದಾಗಿ ಮೇಲೆ ತಿಳಿಸಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವು ಚಾಸಾ-1 ರವರ ಕೂದಲನ್ನು ಹಿಡಿದು ಕೈಗಳಿಂದ ಮುಖಕ್ಕೆ , ಕುತ್ತಿಗೆಗೆ ಬೆನ್ನಿಗೆ ಹೊಡೆದು ಸಾಧಾರಣ ಸ್ವರೂಪದ ಗಾಯವುಂಟು ಮಾಡಿದರ ಮೂಲಕ ಭಾ.ನ್ಯಾ.ಸಂ.ಕಾಯ್ದೆ ಕಲಂ. 115(2) ಸಹ ಕಲಂ 3(5) ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಮೂರನೆಯದಾಗಿ ಈ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ನೇ ಆರೋಪಿಯಾದ ನೀನು ಚಾಸಾ-1 ರವರಿಗೆ ಅಲ್ಲೆ ಬಿದ್ದಿದ್ದ ಒಂದು ಕಟ್ಟಿಗೆಯಿದ ಬೆನ್ನಿಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡುವ ಮೂಲಕ ಮತ್ತು ಸಾರ್ವಜನಿಕ ಸ್ಥಳದಲ್ಲಿ ಮಾನಕ್ಕೆ ಕುಂದುಂಟಾಗುವಂತೆ ವರ್ತಿಸುವ ಮೂಲಕ ಭಾ.ನ್ಯಾ.ಸಂ.ಕಾಯ್ದೆ ಕಲಂ. 118(1) ಸಹವಾಚಕ ಕಲಂ. 3(5) ರಂತೆ ದಂಡನೀಯ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಎಸಗಿರುವಿರಿ?

ಕೊನೆಯದಾಗಿ ಈ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ರಿಂದ 4 ನೇ ಆರೋಪಿತರಾದ ನೀವು ಚಾಸಾ-1 ರವರಿಗೆ ನಮ್ಮ ವಿಚಾರವಾಗಿ ಮಾತನಾಡಿದರೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಅಂತ ಜೀವ ಬೆದರಿಕೆ ಹಾಕಿರುದರಿಂದ ನಿಮ್ಮ ವಿರುದ್ದ ಮೂಲಕ ಭಾ.ನ್ಯಾ.ಸಂ.ಕಾಯ್ದೆ ಕಲಂ. 351(2) ಸಹವಾಚಕ ಕಲಂ. 3(5) ರಂತೆ ದಂಡನೀಯ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಎಸಗಿರುವಿರಿ?

ಸ್ಥಳಃ ಚನ್ನಗಿರಿ.

ದಿನಾಂಕಃ 16-07-2025

**(ಶ್ರೀಮತಿ ಮಹಾಲಕ್ಷ್ಮೀ ಜಿ )**
**1ನೇ ಹೆಚ್ಚುವರಿ ಪ್ರ.ದ.ನ್ಯಾ ,**
**ದಂಡಾಧಿಕಾರಿ, ಚನ್ನಗಿರಿ.**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಚನ್ನಗಿರಿ, ನ್ಯಾಯಾಲಯದಲ್ಲಿ**

**ಸಿಸಿ ನಂ: 424/2025**

1. **ಕರ್ನಾಟಕ ಸರ್ಕಾರ (ಚನ್ನಗಿರಿ ಪಿ.ಎಸ್ )**

**ವಿರುದ್ಧ**

ಎ.4 ಸುಮಿತ್ರಾ ಕೋಂ ಮಹೇಶನಾಯ್ಕ
ವಯಸ್ಸುಃ 34 ವರ್ಷ

## ಆರೋಪಿಯ ಹೇಳಿಕೆ

1. ಈಗ ಓದಿ ಹೇಳಿದ ನಿನ್ನ ಮೇಲಿನ ಆಪಾದನೆಯನ್ನು ಕೇಳಿದ್ದಿಯಾ? ತಿಳಿಯಿತೇ?

ಉತ್ತರಃ

2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಆರೋಪಿತಳಿಗೆ ಆರೋಪಣೆಯ ಸಾರಾಂಶವನ್ನು ದಿನಾಂಕಃ 16-07-2025 ರಂದು ತೆರೆದ ನ್ಯಾಯಾಲಯದಲ್ಲಿ ಓದಿ ಕೇಳಿ ಅವನುಃಳು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.)

ದಿನಾಂಕ:16-07-2025

**(ಶ್ರೀಮತಿ ಮಹಾಲಕ್ಷ್ಮೀ ಜಿ )**
**1ನೇ ಹೆಚ್ಚುವರಿ ಪ್ರ.ದ.ನ್ಯಾ , ದಂಡಾಧಿಕಾರಿ,**
**ಚನ್ನಗಿರಿ.**